# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯಲ್ಲಿ ಗುತ್ತಿಗೆ (Contract) ಆಧಾರದ ಮೇಲೆ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 10 ಪಿಆರ್‌ಇ 2019, ದಿನಾಂಕಕ.05.03.2019.
2. ಕಾರಾಗೃಹಗಳ ಮತ್ತು ಸುಧಾರಣಾ ಸೇವೆ ಇಲಾಖಾ ಮುಖ್ಯಸ್ಥರ ಪತ್ರ ಸಂಖ್ಯೆ:ಇ4/ಸಿಆರ್-29/2017-18, ದಿನಾಂಕ.31.03.2020.

*******

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ಕಾರಾಗೃಹ ಇಲಾಖೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಂಡಿರುವ ವೈದ್ಯಾಧಿಕಾರಿಗಳು ಸೇರಿ ವಿವಿಧ ವೃಂದದ ಒಟ್ಟು 92 ಹುದ್ದೆಗಳನ್ನು ದಿನಾಂಕ.01.04.2019ರಿಂದ 31.03.2020ರವರೆಗೆ ಮುಂದುವರೆಸಲು ಸಹಮತಿ ನೀಡಲಾಗಿದೆ.

ಓದಲಾದ (2) ಪತ್ರದಲ್ಲಿ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖಾ ಮುಖ್ಯಸ್ಥರು ಕಾರಾಗೃಹಗಳಲ್ಲಿನ ಬಂದಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವ ಸಂಬಂಧ ಗುತ್ತಿಗೆ ಆಧಾರದ ಮೇಲೆ 10 ವೈದ್ಯಾಧಿಕಾರಿಗಳು ಹಾಗೂ 01 ಸ್ಟ್ಯಾಫ್ ನರ್ಸ್ ಹುದ್ದೆಗಳನ್ನು 01 ವರ್ಷದ ಅವಧಿಗೆ ಭರ್ತಿ ಮಾಡಿಕೊಳ್ಳಲಾಗಿದ್ದು, ಅವರ ಅವಧಿ ದಿನಾಂಕ:31-03-2020ಕ್ಕೆ ಅಂತ್ಯಗೊಳ್ಳುತ್ತದೆ.

ಪ್ರಸ್ತುತ ಕೋವಿಡ್-19 ವೈರಾಣು ಸೋಂಕು ರೋಗ ವ್ಯಾಪಕವಾಗಿ ಹರಡುತ್ತಿದ್ದು, ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆಯಿಂದ ಹೆಚ್ಚಾಗಿ ಹರಡುವ ಅವಕಾಶಗಳಿರುತ್ತದೆ. ಈ ನಿಟ್ಟಿನಲ್ಲಿ ಅಗತ್ಯ ವೈದ್ಯಕೀಯ ಸೇವೆ ಅಗತ್ಯವಿರುವುದರಿಂದ ಕಾರಾಗೃಹಗಳಲ್ಲಿ ವೈದ್ಯಾಧಿಕಾರಿಗಳ ಸೇವೆಯನ್ನು ಒದಗಿಸುವಂತೆ ಗೌ||ಸರ್ವೋಚ್ಚ ನ್ಯಾಯಾಲಯವರು ಆದೇಶಿಸಿರುತ್ತದೆ.

ಮುಂದುವರೆದು, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಕಾರಾಗೃಹಗಳಲ್ಲದೆ ಇತರ ಕಾರಾಗೃಹಗಳಲ್ಲಿಯೂ ವೈದ್ಯಾಧಿಕಾರಿ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳ ಹುದ್ದೆಗಳು ಖಾಲಿಯಿದ್ದು, ಸದರಿ ಹುದ್ದೆಗಳಿಗೂ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳನ್ನ ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ.

ಹುದ್ದೆಗಳ ವಿವರ:-

| ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | | ಒಟ್ಟು | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| | | ಪ್ರತಿನಿಯೋಜನೆ ಮೇಲೆ | ಗುತ್ತಿಗೆ ಆಧಾರದ ಮೇಲೆ | | |
| ವೈದ್ಯಾಧಿಕಾರಿಗಳು | 20 | 05 | 10 | 15 | 05 |
| ಸೈಕ್ಯಾಟ್ರಿಸ್ಟ್ | 02 | 01 | - | 01 | 01 |
| ಕ್ಲಿನಿಕಲ್ ಸೈಕಾಲಜಿಸ್ಟ್ | 01 | 01 | - | 01 | - |
| ಸ್ಟ್ಯಾಫ್ ನರ್ಸ್ | 04 | - | 01 | 01 | 03 |
| ನರ್ಸ್ | 05 | 01 | - | 01 | 04 |
| ಜೂನಿಯರ್ ಲ್ಯಾಬ್ ಟೆಕ್ನೀಷಿಯನ್ | 07 | 04 | - | 04 | 03 |
| ಫಾರ್ಮಾಸಿಸ್ಟ್ | 17 | 10 | - | 10 | 07 |
| ಎಕ್ಸರೇ ಟೆಕ್ನೀಷಿಯನ್ | 04 | 03 | - | 03 | 01 |
| ಒಟ್ಟು | 60 | 25 | 11 | 36 | 24 |

ಕಾರಾಗೃಹಗಳ ಬಂದಿಗಳ ಆರೋಗ್ಯ ದೃಷ್ಟಿಯಿಂದ ಮತ್ತು ಕೋವಿಡ್-19 ವೈರಾಣು ಸೋಂಕು ರೋಗ ನಿಯಂತ್ರಣಕ್ಕಾಗಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 10 ವೈದ್ಯಾಧಿಕಾರಿಗಳು ಮತ್ತು 01 ಸ್ಟ್ಯಾಫ್ ನರ್ಸ್‌ನ್ನು ಮುಂದುವರೆಸಲು ಮತ್ತು ಇತರ ಕಾರಾಗೃಹಗಳಲ್ಲಿ ಖಾಲಿ ಇರುವ 05 ವೈದ್ಯಾಧಿಕಾರಿಗಳು, 01 ಸೈಕ್ಯಾಟ್ರಿಸ್ಟ್ ಹಾಗೂ 18 ಅರೆ ವೈದ್ಯಕೀಯ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಆದೇಶ ನೀಡುವಂತೆ ಇಲಾಖೆ ಮುಖ್ಯಸ್ಥರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 35 ಪಿಆರ್‌ಇ 2020,</u>**

**<u>ಬೆಂಗಳೂರು, ದಿನಾಂಕ: 01 /04/2020</u>**

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರಾಗೃಹಗಳಲ್ಲಿ ಖಾಲಿಯಿರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಅಧಿಕಾರಿ ಸಿಬ್ಬಂದಿಗಳ ಹುದ್ದೆಗಳಲ್ಲಿ ಪ್ರಸ್ತುತ ಪ್ರತಿ ನಿಯೋಜನೆ/ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿ/ ಅರೆ ವೈದ್ಯಕೀಯ ಸಿಬ್ಬಂದಿಯವರ ಸೇವೆಯನ್ನು ದಿನಾಂಕ.01.04.2020 ರಿಂದ 31.03.2021ರವರೆಗೆ ಮುಂದುವರೆಸಲು ಸಹಮತಿ ನೀಡಿ ಆದೇಶಿಸಿದೆ.

ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಅಧಿಕಾರಿ ಸಿಬ್ಬಂದಿಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2056-00-101-0-01-034 ಗುತ್ತಿಗೆ/ ಹೊರ ಗುತ್ತಿಗೆ ಅಡಿಯಲ್ಲಿ ಬಿಡುಗಡೆಗೊಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆಃ ಆಇ 166 ವೆಚ್ಚ-11/2020, ದಿನಾಂಕಃ 01/04/2020 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. R. Shobha
**(ಎಂ.ಆರ್. ಶೋಭಾ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಇವರಿಗೆ:

1) ಮಹಾಲೇಖಪಾಲರು (ಜಿ&ಎಸ್ಎಸ್ಎ, ಇ&ಆರ್ಎಸ್ಎ), ಕರ್ನಾಟಕ, ಬೆಂಗಳೂರು.
2) ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳು, ಕರ್ನಾಟಕ ರಾಜ್ಯ, ಶೇಷಾದ್ರಿ ರಸ್ತೆ, ಬೆಂಗಳೂರು.
3) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ಉಪ ನಿರ್ದೇಶಕರು ಖಜಾನೆ ನಿರ್ವಹಣಾ ಗಣಕ ಯಂತ್ರ ಕೇಂದ್ರ, ಖನಿಜ ಭವನ, ಬೆಂಗಳೂರು.

**ಪ್ರತಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಒಳಾಡಳಿತ ಇಲಾಖೆ, ಇವರ ಹಿರಿಯ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಜಂಟಿ ಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ ಇವರ ಆಪ್ತ ಸಹಾಯಕರು.
3) ಸರ್ಕಾರದ ಉಪ ಕಾರ್ಯದರ್ಶಿಗಳು (ಅಪರಾದಗಳು), ಒಳಾಡಳಿತ ಇಲಾಖೆ.
4) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11).
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಸಂಗ್ರಹಣಾ ಕೋಶ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ).
6) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.